# ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್.ಸಿ ನ್ಯಾಯಾಲಯ, ಶ್ರೀರಂಗಪಟ್ಟಣ

ಸಿ.ಸಿ. 288/ 2013

| | | | |
|---|---|---|---|
| ಸಾಕ್ಷಿಯ ಹೆಸರು | ಃ ಎಂ ಜಿ ರಮೇಶ್ | ಪ್ರಾ ಸಾ ಃ | 03 |
| ತಂದೆ/ಗಂಡನ ಹೆಸರು | ಃ ವಿ ಗೋವಿಂದರಾಜು | ಚಾ ಸಾ ಃ | 02 |
| ವಯಸ್ಸು | ಃ 40 ವರ್ಷ | | |
| ವೃತ್ತಿ | ಃ ಕೆ ಎಸ್ ಆರ್ ಟಿ ಸಿ ಚಾಲಕ. | | |
| ವಾಸಸ್ಥಳ | ಃ ಅರವಿಂದ ನಗರ, ಮೈಸೂರು | | |

ಸಾಕ್ಷಿಗೆ ದಿನಾಂಕಃ 26.02.2020 ರಂದು ಪ್ರಮಾಣ ವಚನ ನೀಡಲಾಯಿತು

ಮುಖ್ಯ ವಿಚಾರಣೆಃ ಸ.ಸ.ಅ ರವರಿಂದ

ಚಾಸಾ 1 ರವರು ಗೊತ್ತು . ಅವರು ಕೆ ಎಸ್ ಆರ್ ಟಿ ಸಿ ನಿರ್ವಾಹಕ . ಚಾಸಾ 3 ಗೊತ್ತು. ನನಗೆ ಆರೋಪಿ ಗೊತ್ತು.

ನಾನು ಮೈಸೂರು ನಗರ ಸಾರಿಗೆ 1 ನೇ ಘಟಕದಲ್ಲಿ ಸುಮಾರು 5 ವರ್ಷದಿಂದ ಚಾಲಕನಾಗಿ ಕೆಲಸ ಮಾಡುತ್ತಿದ್ದೇನೆ. ದಿನಾಂಕ 06.11.2011 ರಂದು ಕೆ ಎಸ್ ಆರ್ ಟಿ ಸಿ ಬಸ್ ಸಂಖ್ಯೆ ಕೆಎ 09- ಎಫ್ 4793 ರ ಬಸ್ಸಿನಲ್ಲಿ ಚಾಲಕನಾಗಿ ಕೆಲಸ ನಿರ್ವಹಿಸುತ್ತಿದ್ದೆನು. ಚಾಸಾ 1 ರವರು ಸದರಿ ಬಸ್ ನಲ್ಲಿ ನಿರ್ವಾಹಕರಾಗಿ ಕೆಲಸ ನಿರ್ವಹಿಸುತ್ತಿದ್ದರು. ರೂಟ್ ನಂ 172 ಬನ್ನಿಮಂಟಪ ಡಿಪೋದಿಂದ ಸಿಟಿ ಬಸ್ ಸ್ಟ್ಯಾಂಡ್ ಗೆ ಬಂದು ಮೈಸೂರು ಬೆಳವಾಡಿ ಮಾರ್ಗದಲ್ಲಿ ಬಸ್ಸನ್ನು ಚಾಲನೆ ಮಾಡಿಕೊಂಡು ಬರುವಾಗ 2 ನೇ ಟ್ರಿಪ್ ನಲ್ಲಿ ಮೈಸೂರಿನಿಂದ ಬೆಳವಾಡಿಗೆ ಹೋಗುತ್ತಿರುವಾಗ ಆರೋಪಿ ಶಿವು ಎಂಬುವವರು ಕೆಸರೆ ಸ್ಟಾಪ್ ನಲ್ಲಿ ಬಸ್ಸನ್ನು

ಹತ್ತಿದರು. ಚಾಸಾ 1 ರವರಿಗೆ ಆರೋಪಿ 1000/- ಮುಖ ಬೆಲೆಯ ನೋಟನ್ನು ಟಿಕೆಟ್ ಕೊಡುವಂತೆ ನೀಡಿದರು ಮ. 3.15 ಗಂಟೆಯಲ್ಲಿ ಬೆಳವಾಡಿ ಗ್ರಾಮಕ್ಕೆ ಬಸ್ಸು ಬಂದಾಗ ಚಾಸಾ 1 ರವರು 1 ಸಾವಿರ ರೂಪಾಯಿಗೆ ಚಿಲ್ಲರೆ ಇಲ್ಲ ನಂತರ ಕೊಡುತ್ತೇ ಎಂದಾಗ ಆರೋಪಿ ಚಾಸಾ 1 ರವರಿಗೆ ಬೋಳಿಮಗನೆ , ಎಂದು ಅವಾಚ್ಯ ಶಬ್ದಗಳಿಂದ ಬೈಯ್ದು ಚಾಸಾ 1 ರವರ ಸಮವಸ್ತ್ರವನ್ನು ಕೈಯಿಂದ ಹಿಡಿದು ಎಳೆದಾಡಿದರು. ಆರೋಪಿ ಚಾಸಾ 1 ರವರಿಗೆ ಕೈಯಿಂದ ಕುತ್ತಿಗೆಯ ಹತ್ತಿರ ಹಾಗೂ ಅವರ ಕಾಲಿನ ಎಡಭಾಗಕ್ಕೆ ಹಲ್ಲೆಯನ್ನು ಮಾಡಿರುತ್ತಾರೆ ಆಗ ನಾನು ಮತ್ತು ಗ್ರಾಮಸ್ಥರು ಜಗಳ ಬಿಡಿಸಿ ಸಮಾಧಾನ ಪಡಿಸಿದೆವು ನಂತರ ಚಾಸಾ 1 ರವರನ್ನು ಶ್ರೀರಂಗಪಟ್ಟಣದ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲಿಸಿದೆವು . ನಂತರ ಚಾಸಾ 1 ರವರು ಪೋಲಿಸರಿಗೆ ದೂರನ್ನು ನೀಡಿರುತ್ತಾರೆ . ಈ ವಿಚಾರವಾಗಿ ನಾನು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ. ಆರೋಪಿ ಚಾಸಾ 1 ರವರನ್ನು ಹಿಡಿದು ಎಳೆದಾಡಿದಾಗ ಚಾಸಾ 1 ರವರ ಸಮವಸ್ತ್ರದ ಜೇಬಿನ ಎಡಬಾಗ ಹರಿದುಹಹೋಗಿರುತ್ತದೆ. ಸಾಕ್ಷಿಯು ನ್ಯಾ.ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನ್ಯಾ. ಮುಂದೆ ಇರುವ ಚಾಸಾ 1 ರವರು ಗಲಾಟೆ ದಿನ ಧರಿಸಿದ್ದ ಹರಿದುಹೋದ ಖಾಕಿ ಸಮವಸ್ತ್ರವನ್ನು ನೋಡಿ ಗುರುತಿಸಿದ್ದು ಮುಮಾ 1 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು ಆರೋಪಿಗಳ ಪರ ಸಿ ಎಸ್ ವಿ ವಕೀಲರಿಂದ</u>

ಮ. 3.30 ರ ಸುಮಾರಿಗೆ ಚಾಸಾ 1 ರವರ ಜೊತೆ ಪೋಲಿಸ್ ಠಾಣೆಗೆ ಹೋಗಿರುತ್ತೇನೆ. ಠಾಣೆಯಲ್ಲಿ ಸುಮಾರು ಅರ್ಧ ಗಂಟೆ ಇದ್ದೆವು . ನಂತರ ನಾನು ಚಾಸಾ 1 ರವರೊಂದಿಗೆ ಆಸ್ಪತ್ರೆಗೆ ಹೋಗಿರುತ್ತೇನೆ. ಆಸ್ಪತ್ರೆಗೆ ಹೋದಾಗ ಸಮಯ

ಮ. 3.45 ಗಂಟೆಯಾಗಿತ್ತು . ಪ್ರಯಾಣಿಕರು ನಿರ್ವಾಹಕರಿಗೆ ಯಾವ ಯಾವ ಮುಖಬೆಲೆಯ ನೋಟನ್ನು ನೀಡಿರುತ್ತಾರೆ ಎಷ್ಟು ಹಣವನ್ನು ನೀಡಿರುತ್ತಾರೆ ನನಗೆ ಹೇಳಲು ಬರುವುದಿಲ್ಲ. ಆರೋಪಿ ಚಾಸಾ 1 ರವರಿಗೆ 1 ಸಾವಿರ ಹಣವನ್ನು ನೀಡಿದ್ದನ್ನು ನಾನು ಖುದ್ದಾಗಿ ನೋಡಿಲ್ಲ. ಘಟನೆ ನಡೆದ ದಿನದಂದು ನಾನು ಚಾಲಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆ. ಘಟನೆ ನಡೆದಾಗ ನಾನು ಬಸ್ಸನ್ನು ನಿಲ್ಲಿಸಿ ಹಿಂಬದಿಗೆ ಹೋಗಿ ನೋಡಿರುತ್ತೇನೆ. ನಡೆದ ಘಟನೆಯನ್ನು ನಾನು ಖುದ್ದಾಗಿ ನೋಡಿಲ್ಲ. ಕೆಲವೊಮ್ಮೆ ಬಸ್ಸು ಚಲಿಸುತ್ತಿದ್ದಾಗ ನಿರ್ವಾಹಕರು ಆಯ ತಪ್ಪುವುದು ಸಹಜ ಎಂದರೆ ಸರಿ . ಬೆಳವಾಡಿ ಗ್ರಾಮದಲ್ಲಿ ಚಾಸಾ 1 ರವರು ಬಸ್ಸಿನಲ್ಲಿ ಆಯ ತಪ್ಪಿ ಬಿದ್ದುದರಿಂದ ಅವರಿಗೆ ಗಾಯವಾಗಿದೆ ಎಂದರೆ ಸರಿಯಲ್ಲ. ಸಾಕ್ಷಿಯು ಆರೋಪಿ ಹಲ್ಲೆ ಮಾಡಿರುತ್ತಾರೆ ಎನ್ನುತ್ತಾರೆ. ಜಗಳವನ್ನು ಬಿಡಿಸಲು ಬಂದ ಗ್ರಾಮಸ್ಥರ ಹೆಸರು ಹಾಗೂ ಹಿನ್ನೆಲೆ ನನಗೆ ಗೊತ್ತಿಲ್ಲ. ಆರೋಪಿಯನ್ನು ನಾನು ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಪೋಲಿಸರಿಗೆ ನಾನು ನೀಡಿದ ಹೇಳಿಕೆಯ ಅಂಶಗಳು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ಮ. 3.30 ಕ್ಕೆ ನೀಡಿರುತ್ತೇನೆ. ಬಸ್ಸನ್ನು ನಾನು ತಡವಾಗಿ ಚಲಾಯಿಸಿಕೊಂಡು ಬಂದಿದ್ದರಿಂದ ನನ್ನ ಭಾದ್ಯತೆಯಿಂದ ತಪ್ಪಿಸಿಕೊಳ್ಳುವ ಉದ್ದೇಶದಿಂದ ಆರೋಪಿ ಗಲಾಟೆ ಮಾಡಿರುತ್ತಾನೆ ಎಂದು ಸುಳ್ಳು ಘಟನೆ ಸೃಷ್ಟಿಸಿ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ 1 ರವರಿಗೆ ಅನುಕೂಲವಾಗಲಲಿ ಎಂದು ಅವರ ದೂರಿನ ಅನುಗುಣವಾಗಿ ಸುಳ್ಳು

ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪೋಲಿಸರ ಮುಂದೆಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಚಾಸಾ 1 ರವರು ಸುಳ್ಳು ಗಾಯದ ಪ್ರಮಾಣವನ್ನು ಸೃಷ್ಟಿಸಿ ಗಾಯವು ಆರೋಪಿಯ ಹಲ್ಲೆಯಿಂದ ಉಂಟಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆರೋಪಿಯನ್ನು ನೋಡಲೇ ಇಲ್ಲ ಚಾಸಾ 1 ರವರಿಗೆ ಸಹಾಯವಾಗಲಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮುಮಾ 1 ಸಾಮಾನ್ಯವಾಗಿ ಎಲ್ಲಾ ಕಡೆ ಸಿಗುತ್ತದೆ ಪ್ರಕರಣಕ್ಕಾಗಿ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ. ಓ. ಹೇ. ಸ. ಒ.

ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ
ಶ್ರೀರಂಗಪಟ್ಟಣ.